**ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್**

**ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು (ಗ್ರಾ) ಜಿಲ್ಲೆ,**

**ಬೆಂಗಳೂರು.**

**ಸಂ:ಡಿಬಿಸಿಎಂ/ಆರ್/ವಿನಿ/ಸಿಆರ್-41/2008-09 ದಿನಾಂಕ:30/6/2009**

**ವಿಷಯ:-ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 4(1)(ಬಿ)
ಅನುಸಾರ ಬಿಸಿಎಂ ಇಲಾಖೆಗೆ ಸಂಬಂಧಿಸಿದಂತೆ
ಕಛೇರಿ ಮಹಿತಿಯನ್ನು ಪ್ರಕಟಿಸುವ ಬಗ್ಗೆ.**

* * * *

ಕರ್ನಾಟಕ ಸರ್ಕಾರವು ಜಾರಿಗೆ ತಂದಿರುವ 2005ರ ಮಾಹಿತಿ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸುವ ಸಂಬಂಧ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 5(1) 5(2) ಮತ್ತು 19(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಕಛೇರಿ ವ್ಯಾಪ್ತಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಮೇಲಿನ ಕಾಯ್ದೆಯನ್ವಯ ಒದಗಿಸಲು ಮಾಹಿತಿ ಕೋರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು ಸಾರ್ವಜನಿಕ ಸಂಪರ್ಕ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ಈ ಕೆಳಕಾಣಿಸಿದಂತೆ ನೇಮಿಸಲಾಗಿದೆ.

| **ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ 2005 ಕಲಂ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ** | **ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ 2005 ಕಲಂ 5(2)ರ ಪ್ರಕಾರ ಸಹಾಯಕ ಮಾಹಿತಿ ಅಧಿಕಾರಿ** | **ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ 2005 ಕಲಂ 19(1)ರ ಪ್ರಕಾರ ಮೇಲ್ಮನವಿ ಅಧಿಕಾರಿ** |
|---|---|---|
| ಜಿಲ್ಲಾ ಅಧಿಕಾರಿ,<br>ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,<br>ಬೆಂಗಳೂರು ಗ್ರಾಮಾಂತರ ಜಿಲ್ಲೆ,<br>ಬೆಂಗಳೂರು. | ಕಛೇರಿ ಮೇಲ್ವಿಚಾರಕರು<br>ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,<br>ಬೆಂಗಳೂರು ಗ್ರಾಮಾಂತರ ಜಿಲ್ಲೆ,<br>ಬೆಂಗಳೂರು. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು<br>ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್,<br>ಬೆಂಗಳೂರು ಗ್ರಾಮಾಂತರ ಜಿಲ್ಲೆ,<br>ಬೆಂಗಳೂರು. |

ಸರ್ಕಾರ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಜನಾಂಗದವರನ್ನು ಗುರುತಿಸಿ, ಅವರ ಕ್ಷೇಮಾಭಿವೃದ್ಧಿಗಾಗಿ 1977 ರಿಂದ ಜನತೆಯ ಆಶೋತ್ತರಗಳನ್ನು ಈಡೇರಿಸಲು ಹಲವಾರು ಜನಹಿತ ಹಾಗೂ ಪ್ರಗತಿಪರ ಯೋಜನೆಗಳನ್ನು ಇಲಾಖೆಯು ಹಮ್ಮಿಕೊಂಡಿದೆ. ಸರ್ಕಾರ ರಾಜ್ಯದ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸಂವಿಧಾನದ 15(4)ನೇ ಅನುಚ್ಛೇಧದಂತೆ ಶೈಕ್ಷಣಿಕ ಸೌಲಭ್ಯ ಮತ್ತು 16(4)ನೇ ಅನುಚ್ಛೇಧದಂತೆ ಉದ್ಯೋಗ ಮೀಸಲಾತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತಿದೆ. ಒಟ್ಟಾರೆ ಈ ಇಲಾಖೆಯು ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಜನರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಸ್ವಾವಲಂಬಿಗಳಾಗಲು ಶ್ರಮಿಸುತ್ತಿದೆ. ಗ್ರಾಮೀಣ ಹಾಗೂ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರಲ್ಲಿ ಪ್ರತಿಭಾನ್ವೇಷಣೆ, ಪ್ರತಿಭಾ ಪ್ರೋತ್ಸಾಹ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಹಾಯಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ 4 ತಾಲ್ಲೂಕುಗಳನ್ನು ಒಳಗೊಂಡ ಜಿಲ್ಲೆಯಾಗಿರುತ್ತದೆ. ಈ ಜಿಲ್ಲೆಗೆ ದೇವನಹಳ್ಳಿ. ದೊಡ್ಡಬಳ್ಳಾಪುರ, ಹೊಸಕೋಟೆ ಹಾಗೂ ನೆಲಮಂಗಲ ತಾಲ್ಲೂಕುಗಳು ಸೇರುತ್ತದೆ. 2001ರ ಜನಗಣತಿ ಪ್ರಕಾರ 8.50 ಲಕ್ಷ ಜನಸಂಖ್ಯೆಯನ್ನು ಹೊಂದಿರುತ್ತದೆ. ಹಿಂದುಳಿದ ವರ್ಗಗಳ ಇಲಾಖಾ ವತಿಯಿಂದ ಈ ಜಿಲ್ಲೆಯಲ್ಲಿ 21 ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು, 3 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು, 1 ಆಶ್ರಮಶಾಲೆಗಳು ಹಾಗೂ 1 ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. 1 ವಸತಿಶಾಲೆ ಸಹ ಕಾರ್ಯನಿರ್ವಹಿಸುತ್ತಿವೆ. ಒಟ್ಟು 26 ಇಲಾಖಾ ಸಂಸ್ಥೆಗಳಲ್ಲಿ 14 ಸಂಸ್ಥೆಗಳು ಸ್ವಂತ ಕಟ್ಟಡವನ್ನು ಹೊಂದಿದ್ದು, 2 ಕಟ್ಟಡಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಉಳಿದ ಸಂಸ್ಥೆಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

## ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಛೇರಿ ಸಿಬ್ಬಂದಿ ವರ್ಗದವರ ವಿವರ

| ಕ್ರ. ಸಂ. | ಅಧಿಕಾರಿ/ನೌಕರರ ಹೆಸರು | ಪದನಾಮ | ವೇತನಶ್ರೇಣಿ | ಪಡೆಯುತ್ತಿರುವ ವೇತನ | ದೂರವಾಣಿ ಸಂಖ್ಯೆ |
|---|---|---|---|---|---|
| 1 | ಡಿ.ಕೆ.ಸಣ್ಣನಾಯಕ್ | ಜಿಲ್ಲಾ ಅಧಿಕಾರಿ | 11400 – 21600 | 16400–00 | 22861306 |
| 2 | ಟಿ.ಬಿ.ಬ್ರಹ್ಮದೇವಯ್ಯ | ಕಛೇರಿ ಮೇಲ್ವಿಚಾರಕರು | 10000 – 18150 | 15200–00 | 22861306 |
| 3 | ಎನ್.ಜಿ.ಅರುಣ | ಪ್ರ.ದ.ಸ | 7275 – 13350 | 9500–00 | 22861306 |
| 4 | ಎಂ.ಪಿ.ಸುರೇಶ | ದ್ವಿ.ದ.ಸ | 6250 – 12000 | 9275–00 | 22861306 |
| 5 | ಯಲ್ಲಮ್ಮ | ದ್ವಿ.ದ.ಸ | 6250 – 12000 | 7800–00 | 22861306 |
| 6 | ಗೋಪಾಲಪ್ಪ | ದ್ವಿ.ದ.ಸ | 5800 – 10500 | 5900–00 | 22861306 |
| 7 | ಹೇಮಲತಹೆಚ್.ಎಂ | ಬೆರಳಚ್ಚುಗಾರರು | 5800 – 10500 | 6375–00 | 22861306 |
| 8 | ಟಿ.ವೆಂಕಟೇಶ | ಗ್ರೂಪ್ – ಡಿ | 5200 – 8200 | 6125–00 | 22861306 |

**ಜಿಲ್ಲಾ ಕಛೇರಿಯ ಕೆಲಸ ಕಾರ್ಯಗಳ ನಿರ್ವಹಣೆ:–**

1) ಜಿಲ್ಲೆಯಲ್ಲಿನ ನೌಕರರ ಮುಂಬಡ್ತಿ ಹಾಗೂ ವೇತನ ಹಾಗೂ ವೈದ್ಯಕೀಯ ಬಿಲ್ಲುಗಳ ಪ್ರಸ್ತಾವನೆ ಮೇಲಾಧಿಕಾರಿಗೆ ಸಲ್ಲಿಸುವುದು.
2) ಗ್ರೂಪ್–ಡಿ ನೌಕರರ ಮುಂಬಡ್ತಿ ಹಾಗೂ ಟೈಂ ಬಾಂಡ್ ಮಂಜೂರಾತಿ ಕಾರ್ಯನಿರ್ವಹಣೆ.
3) ಸಿಬ್ಬಂದಿ ವರ್ಗದ ಅಪೆಂಡಿಕ್ಸ್–ಬಿ ತಯಾರಿಕೆ.
4) ಸರ್ಕಾರದಿಂದ ಹಾಗೂ ಜಿಲ್ಲಾ ಪಂಚಾಯತಿಯಿಂದ ಬಿಡುಗಡೆಯಾದ ಅನುದಾನವನ್ನು ತಾಲ್ಲೂಕುಗಳಿಗೆ ಮರು ಬಿಡುಗಡೆ ಮಾಡುವುದು.
5) ಜಿಲ್ಲೆಯ ವಿದ್ಯಾರ್ಥಿನಿಲಯಗಳ ಸಂಬಂಧಿಸಿದ ಕಡತ ನಿರ್ವಹಣೆ ಮತ್ತು ಪತ್ರ ವ್ಯವಹಾರ.
6) 15 ಮತ್ತು 20 ಅಂಶಗಳ ಅನುಷ್ಟಾನ ಕುರಿತು ಕಡತ ನಿರ್ವಹಣೆ.
7) ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ವಿದ್ಯಾರ್ಥಿನಿಲಯಗಳ ಡಿ.ಸಿ.ಬಿಲ್ಲುಗಳ ಮೇಲುಸಹಿ ಕಡತ ನಿರ್ವಹಣೆ.
8) ಅನುಕಂಪ ಆಧಾರದ ನೇಮಕಾತಿ ಪ್ರಸ್ತಾವನೆ ಕಳುಹಿಸುವುದು.
9) ಸಾರ್ವಜನಿಕ ಕುಂದು ಕೊರತೆಗಳ ನಿರ್ವಹಣೆ.
10) ಆಡಿಟ್ ವರದಿಗಳಿಗೆ ಅನುವರ್ತನಾ ವರದಿ ತಯಾರಿಕೆ.
11) ನಿಯತ ಕಾಲಿಕೆಗಳು(ಎಂ.ಎಂ.ಆರ್, ಮಹಿಳಾ ಅಭಿವೃದ್ಧಿ, ಕೆ.ಡಿ.ಪಿ) ಯೋಜನೆ/ಯೋಜನೇತರ ವರದಿ ತಯಾರಿಸಿ ಸಲ್ಲಿಸುವುದು.
12) ನಗದು ಪುಸ್ತಕ ಮತ್ತು ವೋಚರ್ ಕಡತ ನಿರ್ವಹಣೆ.
13) ವೋಚರ್‌ವೈಸ್ ಖರ್ಚು ವೆಚ್ಚ ತಯಾರಿಕೆ ಮತ್ತು ಸಮನ್ವಯ ಕಾರ್ಯ.
14) ಘಟಕ ಕಛೇರಿಗಳ ತಪಾಸಣೆ ಮತ್ತು ಸಮೀಕ್ಷೆ.
15) ಕಛೇರಿ ಸ್ವೀಕೃತಿ ಮತ್ತು ರವಾನೆ ಕಾರ್ಯ.
16) ಕೌಶಲ್ಯ ಮತ್ತು ನರ್ಸಿಂಗ್ ತರಭೇತಿ ಕಾರ್ಯಕ್ರಮ ಅನುಷ್ಟಾನ.
17) ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ.
18) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕೌಶಲ್ಯ ಕಲಿಕೆ ಮತ್ತು ಸಾಮಾಗ್ರಿ, ಉತ್ತೇಜನ, ನರ್ಸಿಂಗ್ ತರಭೇತಿ ಕಾರ್ಯಕ್ರಮಗಳ ಅನುಷ್ಟಾನ.
19) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ್ಪಾರ, ಸವಿತಾ, ದೇವಾಂಗ ಜನಾಂಗದವರ ಸಮುದಾಯ ಭವನಗಳ ಮತ್ತು ವಿದ್ಯಾರ್ಥಿ ವೇತನ ನೀಡಿಕೆ ಕಾರ್ಯಕ್ರಮ ಅನುಷ್ಟಾನ.
20) ಕಾನೂನು ತರಭೇತಿ ಕಾರ್ಯಕ್ರಮ ಅನುಷ್ಟಾನ.
21) ಸಿಂಧುತ್ವ ಪ್ರಮಾಣ ಪತ್ರಗಳ ಕಡತಗಳ ನಿರ್ವಹಣೆ ಮತ್ತು ಪತ್ರ ವ್ಯವಹಾರ.
22) ಬೆಳ್ಳಬೆಳಕು ಕಾರ್ಯಕ್ರಮ ಅನುಷ್ಟಾನ.
23) ಶುಲ್ಕ ವಿನಾಯತಿ ಮಂಜೂರಾತಿ ಕಾರ್ಯ ಅನುಷ್ಟಾನ.
24) ಕಛೇರಿ ಪೀಠೋಪಕರಣಗಳು ಹಾಗೂ ಲೇಖನ ಸಾಮಗ್ರಿಗಳ ನಿರ್ವಹಣೆ.
25) ವಿಧಾನ ಸಭೆ/ಪರಿಷತ್, ಲೋಕಸಭೆ/ರಾಜ್ಯಸಭೆ ಪ್ರಶ್ನಾವಳಿಗೆ ಉತ್ತರ ತಯಾರಿಸುವುದು.
26) ವಾರ್ಷಿಕ ಆಡಳಿತ ವರದಿ ಹಾಗೂ ಇಲಾಖಾ ಕಾರ್ಯಕ್ರಮಗಳ ಕ್ರಿಯಾ ಯೋಜನೆ ಸಿದ್ದಪಡಿಸುವುದು.
27) ಕುಟುಂಬ ವಿಶ್ರಾಂತಿ ವೇತನ, ನಿವೃತ್ತಿ ವೇತನ ಪ್ರಕರಣಗಳು, ಉದ್ಯೋಗ ವಿನಿಮಯ ಕೇಂದ್ರಕ್ಕೆ ತ್ರೈಮಾಸಿಕ ವರದಿ, ಶಿಸ್ತು ಪ್ರಕರಣಗಳ ಇತ್ಯರ್ಥ ಕಡತ ನಿರ್ವಹಣೆ.

28) ಜಿಲ್ಲಾ ಪಂಚಾಯತಿಯ ಸಾಮಾನ್ಯ ಸಭೆ, ಸಾಮಾಜಿಕ ನ್ಯಾಯ ಸಮಿತಿ ಸಭೆ ಹಾಗೂ ಇತರೆ ಎಲ್ಲಾ ಸಭೆಗಳಿಗೆ ಮಾಹಿತಿ ಒದಗಿಸುವುದು.
29) ಮಾಹಿತಿ ಹಕ್ಕು ಅಧಿನಿಯ 2005ರಡಿ ಮಾಹಿತಿ ಕೋರುವ ವ್ಯಕ್ತಿಗಳಿಗೆ ಮಾಹಿತಿ ಒದಗಿಸುವುದು.
30) ಹಿಂದುಳಿದ ವರ್ಗಗಳ ಆಯೋಗದವರು ನಡೆಸುವ ಪ್ರಗತಿ ಪರಿಶೀಲನೆಗೆ ಮಾಹಿತಿ ಒದಗಿಸುವುದು.

## ಜಿಲ್ಲಾ ಅಧಿಕಾರಿಗಳ ಕರ್ತವ್ಯ ನಿರ್ವಹಣೆ:–

ಜಿಲ್ಲೆಯಲ್ಲಿನ ಇಲಾಖಾ ವಿದ್ಯಾರ್ಥಿನಿಲಯಗಳ ಸಮರ್ಪಕ ನಿರ್ವಹಣೆ ಬಗ್ಗೆ ನಿರೀಕ್ಷಿತ ಮತ್ತು ಅನಿರೀಕ್ಷಿತವಾಗಿ ಭೇಟಿ ನೀಡಿ ತಪಾಸಣೆ ಮಾಡಿ ಮಾರ್ಗದರ್ಶನ ನೀಡುವುದು. ಹಾಗೂ ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವುದು. ಮೀಸಲಾತಿ ಸಮರ್ಪಕ ನೇಮಕಾತಿಯಾಗಿರುವ ಬಗ್ಗೆ ಘಟಕ ಕಛೇರಿಗಳ ತಪಾಸಣೆ ಮಾಡುವುದು ಹಾಗೂ ಮಾರ್ಗದರ್ಶನ ನೀಡುವುದು. ಶೈಕ್ಷಣಿಕ ಸಂಸ್ಥೆಗಳಿಗೆ ಭೇಟಿ ನೀಡಿ ಪ್ರವೇಶ ದಾಖಲಾತಿ ಪರಿಶೀಲಿಸುವುದು. ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ ವಿದ್ಯಾರ್ಥಿಗಳಿಗೆ ನೀಡಿರುವ ಬಗ್ಗೆ ಪರಿಶೀಲನೆ ಮಾಡುವುದು. ಜಿಲ್ಲಾ ಕಛೇರಿ ಕೆಲಸ ಸಮರ್ಪಕ ನಿರ್ವಹಣೆ, ರಾಜ್ಯ/ಜಿಲ್ಲಾ/ತಾಲ್ಲೂಕು ಮಟ್ಟದ ಸಭೆಗಳಿಗೆ ಹಾಜರಾಗುವುದು. ಪ್ರತಿ ಶನಿವಾರ ಜನಸ್ಪಂದನ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಕುಂದು ಕೊರತೆ ಆಲಿಸಿ ಕ್ರಮಕೈಗೊಳ್ಳುವುದು. ಜಿಲ್ಲೆಯಲ್ಲಿ ಇಲಾಖಾ ಕಾರ್ಯಕ್ರಮ ಅನುಷ್ಟಾನದ ಬಗ್ಗೆ ಸಂಬಂಧಪಟ್ಟ ಕಛೇರಿಗಳಲ್ಲಿ ಸಮನ್ವಯ ಸಾಧಿಸುವುದು. ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ನೀಡುವುದು. ಕಛೇರಿ ಸಿಬ್ಬಂದಿ ವರ್ಗದವರಿಗೆ ಕಛೇರಿಯ ಎಲ್ಲಾ ಕೆಲಸ ಕಾರ್ಯಗಳನ್ನು ಕಾಲಕಾಲಕ್ಕೆ ನಿರ್ವಹಿಸುವಂತೆ ಮಾರ್ಗದರ್ಶನ ನೀಡುವುದು. ಜಿಲ್ಲಾ ಪಂಚಾಯತ್‌ನ ವಿವಿಧ ಕಾರ್ಯಕ್ರಮಗಳ ಅನುಷ್ಟಾನದ ಬಗ್ಗೆ ನೋಡಲ್ ಅಧಿಕಾರಿಯಾಗಿ ಕರ್ತವ್ಯ ನಿರ್ವಹಣೆ. ಜಿಲ್ಲಾಧಿಕಾರಿಗಳು ನೇಮಿಸುವ ಕ್ಷೇತ್ರಕ್ಕೆ ಚುನಾವಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಣೆ ಮಾಡುವುದು. ರಾಷ್ಟ್ರೀಯ ಮತ್ತು ಅಂತರ್‌ರಾಜ್ಯ ಸಮಾಜ ಕಲ್ಯಾಣ / ಹಿಂದುಳಿದ ವರ್ಗಗಳ ಕಲ್ಯಾಣದ ಸಚಿವಾಲಯದ ಅಧಿಕಾರಿಗಳು ಹಾಗೂ ಆಯೋಗದ ಮಾನ್ಯ ಅಧ್ಯಕ್ಷರು, ಸದಸ್ಯರು ಮತ್ತು ಅಧಿಕಾರಿಗಳು ಈ ಜಿಲ್ಲೆಗೆ ಭೇಟಿ ನೀಡಿದಾಗ ಮೇಲಾಧಿಕಾರಿಗಳ ಆದೇಶದಂತೆ ಶಿಷ್ಟಾಚಾರದಂತೆ ಕರ್ತವ್ಯ ನಿರ್ವಹಿಸಿ ಮಾಹಿತಿಯನ್ನು ಒದಗಿಸುವುದು.

**ಸ್ವೀಕೃತಿ:–**

ಕಾರ್ಯಾಲಯಕ್ಕೆ ಸ್ವೀಕೃತಿಯಾಗುವ ಸರ್ಕಾರ, ಅಧೀನ ಕಾರ್ಯಾಲಯದ ಮತ್ತು ಸಾರ್ವಜನಿಕರಿಂದ, ಲೋಕಸಭೆ/ವಿಧಾನ ಪರಿಷತ್ ಹಾಗೂ ಸ್ಥಳೀಯ ಸಂಸ್ಥೆಯ ಸದಸ್ಯರುಗಳಿಂದ ಸ್ವೀಕೃತಿಯಾದ ಪ್ಯಾಕ್ಸ್, ತಂತಿ ಸಂದೇಶ, ಸುತ್ತೋಲೆ, ಸಾಮಾನ್ಯ ಅರ್ಜಿಗಳನ್ನು ಸಾಮಾನ್ಯ ಪುಸ್ತಕದಲ್ಲಿ ಮತ್ತು ಇತರ ಪುಸ್ತಕಗಳಲ್ಲಿ ನೊಂದಣಿ ಮಾಡಿಕೊಂಡು ಆಯಾಯ ಶಾಖೆಯ ವಿಷಯ ನಿರ್ವಾಹಕರಿಗೆ ವಿತರಣೆಯನ್ನು ಮಾಡುವುದು.

**ರವಾನೆ:–**

ಈ ಕಾರ್ಯಾಲಯದಿಂದ ಬಿಡುಗಡೆ ಆಗುವ ವ್ಯವಹಾರಗಳ ಪತ್ರಗಳ ಆದೇಸಗಳು ಹಾಗೂ ನೋಟೀಸುಗಳನ್ನು ರವಾನೆ ಪುಸ್ತಕದಲ್ಲಿ ಮೊಂದಣಿ ಮಾಡಿಕೊಂಡು ಸಂಬಂಧಪಟ್ಟ ಕಛೇರಿ ಇತರರಿಗೆ ರವಾನೆ ಮಾಡುವುದು. ಇವುಗಳಲ್ಲಿ ಕೆಲವು ಅಂಚೆ ಮೂಲಕ ಹಾಗೂ ಕೆಲವು ಸ್ಥಳೀಯವಾಗಿ ಜಾರಿ ಮಾಡುವ ಪತ್ರಗಳನ್ನು ಪ್ರತ್ಯೇಕ ವಹಿಯಲ್ಲಿ ನೊಂದಾಯಿಸಿ ರವಾನೆ ಮಾಡುವುದು. ಹಾಗೂ ಅಂಚೆ ಚೀಟಿಗಳ ಲೆಕ್ಕವನ್ನು ಸಹ ಇಡಲಾಗುವುದು.

**2009–10ನೇ ಸಾಲಿನಲ್ಲಿ ಜಿಲ್ಲಾವಲಯ ಯೋಜನೆ/ಯೋಜನೇತರ ಕಾರ್ಯಕ್ರಮ ಅನುಷ್ಠಾನಕ್ಕೆ ಈ ಕೆಳಕಂಡಂತೆ ಲಿಂಕ್‌ಡಾಕ್ಯುಮೆಂಟ್‌ನಲ್ಲಿ ಆಯವ್ಯಯ ನಿಗಧಿಯಾಗಿದೆ.**

| ಕ್ರ.ಸಂ. | ಕಾರ್ಯಕ್ರಮದ ವಿವರ | ಒದಗಿಸಿರುವ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| **ಜಿಲ್ಲಾ ಪಂಚಾಯತ್ ಕಾರ್ಯಕ್ರಮ – ಯೋಜನೆ** | | |
| 1 | ಬೆಳ್ಳಬೆಳಕು 2225–03–277–2–08 | 1.52 |
| 2 | ಇತರೆ ಹಿಂ.ವ.ಗಳಿಗೆ ಇ.ಬಿ.ಎಲ್. 2225–03–277–2–34 | – |
| 3 | ಹಿಂ.ವ.ಗಳಿಗಾಗಿ ಮೊ.ದೇ.ವ.ಶಾಲೆ 2225–03–277–2–49 | 64.84 |
| 4 | ಹಿಂ.ವ.ವಿ.ನಿಲಯಗಳ ನಿರ್ವಹಣೆ 2225–03–277–2–71 | 15.53 |
| 5 | ಹೊಲಿಗೆ ತರಭೇತಿ ಕೇಂದ್ರಗಳ ನಿರ್ವಹಣೆ & ಹೊಸ ಕೇಂದ್ರಗಳ ಪ್ರಾರಂಭ 2225–03–277–2–89 | 0.97 |
| 6 | ವಕೀಲರಿಗೆ ಸ್ಟೈಫಂಡ್ 2225–03–277–2–93 | 3.24 |
| 7 | ಕಟ್ಟಡಗಳ ವೆಚ್ಚ & ನಿರ್ವಹಣೆ 2225–03–800–0–53 | 22.00 |
| **ಒಟ್ಟು** | | **108.10** |
| **ತಾಲ್ಲೂಕು ಪಂಚಾಯತ್ ಕಾರ್ಯಕ್ರಮ – ಯೋಜನೆ** | | |
| 1 | ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು 2225–03–001–0–01 | 6.40 |
| 2 | ಬಾಲಕ/ಬಾಲಕಿಯರ ಮೆಟ್ರಿಕ್ ಪೂರ್ವ & ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ 2225–03–277–2–72 | – |
| 3 | ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ 2225–03–277–2–73 | 3.55 |
| 4 | ಹೆಚ್ಚಿನ ಊಟ ಮತ್ತು ವಸತಿ ವೆಚ್ಚಗಳ ಹಣ ಸಂದಾಯ 2225–03–277–2–76 | 1.78 |
| 5 | ಮೆಟ್ರಿಕ್ ಪೂರ್ವ & ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸುಧಾರಣೆ 2225–03–277–2–88 | 6.00 |
| **ಒಟ್ಟು** | | **17.73** |
| **ಒಟ್ಟು (ಜಿ.ಪಂ + ತಾ.ಪಂ)** | | **125.83** |
| | | |
| **ಜಿಲ್ಲಾ ಪಂಚಾಯತ್ – ಯೋಜನೇತರ** | | |
| 1 | ನಿರ್ದೇಶನ ಮತ್ತು ಆಡಳಿತ ಕಾರ್ಯನಿರ್ವಾಹಕ ಸಿಬ್ಬಂದಿ 2225–03–001–0–71 | 15.82 |
| 2 | ಆಶ್ರಮಶಾಲೆಗಳು 2225–03–277–1–03 | 4.07 |
| 3 | ಅಲ್ಪಸಂಖ್ಯಾತರಿಗೆ ಶಿಷ್ಯವೇತನ 2225–03–277–2–15 | 0.15 |
| 4 | ಸಾಮಾನ್ಯ ವಿದ್ಯಾರ್ಥಿನಿಲಯಗಳ ಕಟ್ಟಡಗಳಿಗೆ ಸಹಾಯಾನುದಾನ 2225–03–277–2–05 | 0.50 |

| | | |
|---|---|---|
| 5 | ಇತರೆ ಹಿಂದುಳಿದ ವರ್ಗಗಳಿಗೆ ಇತರೆ ರಿಯಾಯತಿಗಳು 2225-03-277-2-52 | 20.00 |
| 6 | ಹಿಂ.ವ.ವಿ.ನಿರ್ವಹಣೆ 2225-03-277-2-71 | 150.73 |
| 7 | ದೇವರಾಜ ಅರಸು ಜನ್ಮ ದಿನಾಚರಣೆ & 15 ಅಂಶಗಳ ಕಾರ್ಯಕ್ರಮದ ಮೇಲೆ ವಿಚಾರಗೋಷ್ಠಿ 2225-03-800-0-51 | 0.15 |
| | **ಒಟ್ಟು** | **191.42** |
| **ತಾಲ್ಲೂಕು ಪಂಚಾಯತ್ – ಯೋಜನೇತರ** | | |
| 1 | ಹಿಂ.ವ.ತಾ.ವಿಸ್ತರಣಾ ಕಛೇರಿಗಳು 2225-03-001-0-01 | 3.04 |
| 2 | ಹೊಲಿಗೆ ತರಬೇತಿ ಕೇಂದ್ರಗಳು 2225-03-102-1-74 | 1.60 |
| 3 | ವಿ.ನಿ.ಇರುವವರಿಗೆ ಪ್ರೋತ್ಸಾಹಕಗಳು 2225-03-277-2-53 | 1.65 |
| 4 | ಹಿಂ.ವ.ವಿ.ಗಳಿಗೆ ವಿದ್ಯಾರ್ಥಿವೇತನ 2225-03-277-2-73 | 10.86 |
| 5 | ಅನಾಥಾಲಯಗಳಿಗೆ ಸಹಾಯಧನ 2225-03-277-2-82 | 1.94 |
| 6 | ಮೆಟ್ರಿಕ್ ಪೂರ್ವ & ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಸುಧಾರಣೆ 2225-03-277-2-88 | 0.25 |
| | **ಒಟ್ಟು** | **19.34** |
| | **ಒಟ್ಟು (ಜಿ.ಪಂ + ತಾ.ಪಂ)** | **210.76** |

ಸಹಿ/-
ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.

**ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಿದೆ:-**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿ.ಅ.ಸು.ಇಲಾಖೆ(ಆಡಳಿತ ಸುಧಾರಣೆ), ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿ.ಅ.ಸು.ಇಲಾಖೆ(ಜನಸ್ಪಂದನ), ಬೆಂಗಳೂರು.
3) ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
4) ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5) ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
6) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.
7) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಬೆಂಗಳೂರು.
8) ಕಛೇರಿ ಪ್ರತಿ.

ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.

ಸಂ:ಡಿಬಿಸಿಎಂ/ಆರ್/ವಿನಿ/ಸಿಆರ್-41/2008-09

ಜಿಲ್ಲಾ ಅಧಿಕಾರಿಗಳ ಕಛೇರಿ
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ
ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು, ದಿನಾಂಕ:7/7/2009.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್,
ಬೆಂಗಳೂರು.

ಮಾನ್ಯರೆ,

**ವಿಷಯ:** ಮಾಹಿತಿ ಹಕ್ಕು ಅಧಿನಿಯಮ ಕಾಯ್ದೆ 2005ರ ಕಲಂ 4(1)(ಬಿ) ಅನುಸಾರ ಬಿಸಿಎಂ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಕಛೇರಿಯ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಬಗ್ಗೆ.

* * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ ಕಾಯ್ದೆ 2005ರ ಕಲಂ 4(1)(ಬಿ) ಅನುಸಾರ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಕಛೇರಿಯ ಮಾಹಿತಿಯನ್ನು ಜಿಲ್ಲಾ ಪಂಚಾಯತ್‌ನ ವೆಬ್‌ಸೈಟ್‌ನಲ್ಲಿ ಈ ಇಲಾಖೆಯ ವೆಬ್‌ಸೈಟ್‌ನ್ನು ಸೃಜಿಸಿ ಪ್ರಕಟಿಸುವ ಸಲುವಾಗಿ ಈ ಪತ್ರಕ್ಕೆ ಮಾಹಿತಿಯನ್ನು ಲಗತ್ತಿಸಿದೆ. ಸದರಿ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ರಾಷ್ಟ್ರೀಯ ಸೂಚ್ಯಂಕ ಅಧಿಕಾರಿಗೆ ಸೂಚಿಸಬೇಕಾಗಿ ಈ ಮೂಲಕ ಕೋರಿದೆ.

ತಮ್ಮ ವಿಶ್ವಾಸಿ,

ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.